ಮಾಡುವ ಕೆಲಸ ಮಾತ್ರ ಉಳಿದಿದೆ. ಇನ್ನು ಉಳಿದಂತಹ 12.ಕಿ.ಮೀ.ಯಿಂದ 20 ಕಿ.ಮೀ. ವರೆಗಿನ ರಸ್ತೆಗೆ ಬೇಕಾಗಿರುವಂತಹ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ 20 ಕಿ.ಮೀ.ರಸ್ತೆಯನ್ನು ನಿರ್ಮಾಣ ಮಾಡುವ ಸಲುವಾಗಿ ಇವತ್ತು ಬಿ.ಓ.ಟಿ. ಸಿಸ್ಟಮ್ ಮೇಲೆ ಈ ರಸ್ತೆಯನ್ನು ಭಾರತ್ ಫೋರ್ಜ್ ಕಂಪನಿಯವರಿಗೆ ಒಪ್ಪಿಗೆಯನ್ನು ಕೊಡಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದ ಕೊನೆಯ ಅಗ್ರಿಮೆಂಟ್ ಆಗಬೇಕು. ಈಗಾಗಲೇ ಇದು ಪೂರ್ವಭಾವಿಯಾಗಿ ಆಗಬೇಕಾದಂತಹ ಒಪ್ಪಂದಗಳೆಲ್ಲವೂ ಆಗಿದ್ದರೂ ಸಹಿತ ಕೊನೆಯ ಒಂದು ಅಗ್ರಿಮೆಂಟ್ ಆದಮೇಲೆ ವರ್ಕ್ ಪ್ರಾರಂಭ ಮಾಡುತ್ತಾರೆ. ಪ್ರಾರಂಭ ಮಾಡಿ 6 ತಿಂಗಳಲ್ಲಿ ಮೊದಲನೆಯ ಹಂತದ ಕೆಲಸ ಮುಗಿಯುತ್ತದೆ. ಎರಡು ವರ್ಷದಲ್ಲಿ ಸಂಪೂರ್ಣವಾಗಿ ರಸ್ತೆ ಕೆಲಸ, ಮುಗಿಯುತ್ತದೆಂದು ನಾನು ಹೇಳಲು ಇಷ್ಟಪಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಸಚಿವರೂ ಕೂಡ ಧಾರವಾಡ ಜಿಲ್ಲೆಯವರಾಗಿದ್ದು ದಯವಿಟ್ಟು ಇದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು. ಸಣ್ಣ ಸಣ್ಣ ಹಳ್ಳಿಗಳು ಅಂದರೆ ಯಮನೂರು ರಸ್ತೆ ಕೂಡ ಬೈಪಾಸ್ ರಸ್ತೆಯಾಗಿದೆ. ಹುಬ್ಬಳ್ಳಿ ಮತ್ತು ಧಾರವಾಡದಲ್ಲಿ ಜನದಟ್ಟಣೆ ಜಾಸ್ತಿಯಾಗಿ ಸಂಚಾರಕ್ಕೆ ಅಡ್ಡಿಯಾಗಿದ್ದು ಇದರಿಂದ ಪರಿಸರ ಮಾಲಿನ್ಯ ಸಹ ಕೆಡುತ್ತಿದೆ. ಆದುದರಿಂದ ಹುಬ್ಬಳ್ಳಿ ಮತ್ತು ಧಾರವಾಡಕ್ಕೆ ಬೈಪಾಸ್ ರಸ್ತೆ ಅತ್ಯಾವಶ್ಯಕವಾಗಿರುವುದರಿಂದ ಮಾನ್ಯ ಸಚಿವರು ಹೆಚ್ಚಿನ ಕಾಳಜಿ ವಹಿಸಿ ಆದಷ್ಟು ಜಾಗ್ರತೆ ಕೆಲಸ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ : ತೀವ್ರಗತಿಯಲ್ಲಿ ಕೆಲಸ ಮಾಡಲು ಕ್ರಮಕೈಗೊಳ್ಳುತ್ತೇನೆ.

ಕನ್ನಡ ಚಿತ್ರಗಳಿಗೆ ಸಹಾಯಧನ

313- ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕರ್ನಾಟಕದಲ್ಲಿ ತಯಾರಾದ ಕನ್ನಡ ಚಿತ್ರಗಳಿಗೆ ಸಹಾಯಧನ ನಿಲ್ಲಿಸಲು ಸರ್ಕಾರವು ನಿರ್ಧರಿಸಿದೆಯೇ?

2) ಕನ್ನಡ ಚಲನಚಿತ್ರಗಳಿಗೆ ಯಾವ ಕಾರಣಕ್ಕಾಗಿ ಸಹಾಯಧನವನ್ನು ನೀಡಲು ಸರ್ಕಾರವು ನಿರ್ಧರಿಸಿತ್ತು. ಯಾವ ವರ್ಷದಿಂದ ಸಹಾಯಧನವನ್ನು ಸರ್ಕಾರ ನೀಡಲು ಪ್ರಾರಂಭಿಸಿದೆ?

ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರಚಾರ ಸಚಿವರು) :

1) 1996-97ನೇ ಸಾಲಿನಿಂದ ಗುಣಮಟ್ಟದ ಆಧಾರದ ಮೇಲೆ ಮಾತ್ರ ಕನ್ನಡ ಚಲನಚಿತ್ರಗಳಿಗೆ ಸಹಾಯ ಧನವನ್ನು ಕೊಡಲು ಸರಕಾರ ನಿರ್ಧರಿಸಿದೆ.

2) ಕನ್ನಡ ಚಲನ ಚಿತ್ರೋದ್ಯಮವು ಸಂಪೂರ್ಣವಾಗಿ ಕರ್ನಾಟಕದಲ್ಲಿಯೇ ನೆಲೆಯೂರಬೇಕೆಂಬ ಉದ್ದೇಶದಿಂದ ಮತ್ತು ಉತ್ತಮ ಗುಣಮಟ್ಟದ ಚಿತ್ರಗಳನ್ನು ನಿರ್ಮಿಸಲು ಅವಕಾಶ ಕೊಡಬೇಕೆಂಬ ಉದ್ದೇಶದಿಂದ ಸಹಾಯಧನವನ್ನು ನೀಡಲು ಸರ್ಕಾರವು ನಿರ್ಧರಿಸಿದ್ದು, 1967-68ನೇ ವರ್ಷದಿಂದ ಸಹಾಯಧನ ನೀಡಲು ಪ್ರಾರಂಭಿಸಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, 1967-68ನೇ ವರ್ಷದಿಂದ ಸಹಾಯಧನ ಪ್ರಾರಂಭವಾದಾಗಿನಿಂದ ಜನಗಳಿಂದ ತೆರಿಗೆ ರೂಪದಲ್ಲಿ ಏನಾದರೂ ಹಣವನ್ನು ವಸೂಲು ಮಾಡುತ್ತಿದ್ದೀರೋ ಆ ರೀತಿ ವಸೂಲು ಮಾಡಿದ್ದರೆ, ಕನ್ನಡ ಚಲನಚಿತ್ರಗಳಿಗೆ ಸಹಾಯಧನ ಕೊಡುವ ಸಲುವಾಗಿ ರಾಜ್ಯದಲ್ಲಿ ಸಾರ್ವಜನಿಕರಿಂದ ತೆರಿಗೆಯನ್ನು ವಸೂಲು ಮಾಡುತ್ತಿದ್ದೀರಾ? 1967-69ನೇ ವರ್ಷದಿಂದ ಏನು ಸಹಾಯಧನ ಪ್ರಾರಂಭ ಮಾಡಿದ್ದೀರಿ ಇದರ ಉದ್ದೇಶ ಕರ್ನಾಟಕದಲ್ಲಿ ಕನ್ನಡ ಚಿತ್ರರಂಗ ಸಮಗ್ರವಾಗಿ ಬೆಳೆದು ಬೇರೂರಬೇಕೆಂಬ ಸದುದ್ದೇಶದಿಂದ ಮಾಡಿದಂತಹ ಒಂದು ಪ್ರಯತ್ನ ಹಾಗೂ ತಮಿಳುನಾಡು ಮತ್ತು ಆಂಧ್ರಪ್ರದೇಶಕ್ಕೆ ಹೋಗಿರತಕ್ಕಂಥವರೆಲ್ಲರೂ ಕರ್ನಾಟಕಕ್ಕೆ ಬಂದು ಸೇರಬೇಕೆಂದು ಉದ್ದೇಶವು ಇದೆ. ನೀವು ಏಕಾಏಕಿಯಾಗಿ ಗುಣಮಟ್ಟ ಎನ್ನತಕ್ಕಂಥ ನಿರ್ಧಾರ ಹಾಕಿ ಸಹಾಯಧನ ನಿಲ್ಲಿಸುವುದರಿಂದ ಎಷ್ಟರಮಟ್ಟಿಗೆ ಇದು ಸಮಂಜಸವಾಗುತ್ತದೆ? ಮತ್ತೆ ಕನ್ನಡ ಚಿತ್ರಗಳು ಬೇರೆ ರಾಜ್ಯಗಳಿಗೆ ಹೋಗುವುದಿಲ್ಲವೇ? ಇದರ ಬಗ್ಗೆ ತಾವು ಸ್ಪಷ್ಟಪಡಿಸಬೇಕು.

ಶ್ರೀ ಎಂ. ಸಿ. ನಾಣಯ್ಯ : ಸಬ್ಸಿಡಿ ಕೋಟಾಕೋಸ್ಕರ, ಸಬ್ಸಿಡಿ ಹಣವನ್ನು ತೆರಿಗೆ ರೂಪದಲ್ಲಿ ವಸೂಲಾತಿ ಮಾಡತಕ್ಕಂಥ ಕ್ರಮ ಏನಾದರೂ ತೆಗೆದುಕೊಂಡಿದ್ದೀರಾ ಎಂದು ಕೇಳಿದ್ದಾರೆ. ನಾವು ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಸರ್ಕಾರದಿಂದ ಸಬ್ಸಿಡಿ ಕೊಡುವುದನ್ನು ಮುಂದುವರೆಸಿಕೊಂಡು ಬರುತ್ತಿದ್ದೇವೆ. ಇಲ್ಲಿಯವರೆಗೆ21 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಸಬ್ಸಿಡಿ ಹಣ ಕೊಟ್ಟಿದ್ದಕ್ಕೋಸ್ಕರ ಅದಕ್ಕೆ ಬೇರೆ ತೆರಿಗೆ ಹಾಕಿ ವಸೂಲು ಮಾಡುತ್ತಿಲ್ಲ. 1996-68ನೇ ವರ್ಷದಿಂದ ಸಬ್ಸಿಡಿ ಕೊಡುವುದಕ್ಕೆ ಪ್ರಾರಂಭವಾಯಿತು. ಈಗ ನಾವು 1997ರಲ್ಲಿದ್ದೇವೆ. ಮಾನ್ಯ ಅಧ್ಯಕ್ಷರೆ, ಸರ್ಕಾರ ನೀಡದೇ ಇರತಕ್ಕಂಥ ಶೇಕಡ 100 ರಷ್ಟು ಮನರಂಜನಾ ತೆರಿಗೆಯನ್ನು ಈಗ ಕೊಟ್ಟಾಯಿತು. ಇಡೀ ರಾಷ್ಟ್ರದಲ್ಲಿ ಯಾವುದೇ ರಾಜ್ಯವು ಕೊಡದೆ ಇರತಕ್ಕಂಥ ಈ ರಿಯಾಯಿತಿಯನ್ನು ನಮ್ಮ ರಾಜ್ಯಸರ್ಕಾರ ಕೊಟ್ಟಿದೆ. ಕನ್ನಡ ಚಿತ್ರಗಳನ್ನು ಬೆಳಸಬೇಕೆಂಬ ದೃಷ್ಟಿಯಿಂದ ಶೇಕಡ 100 ರಷ್ಟು ಮನರಂಜನಾ ತೆರಿಗೆಯನ್ನು ಮನ್ನಾ ಮಾಡಿದ್ದೇವೆ. ಇದು ಇಡೀ ರಾಷ್ಟ್ರದ ಯಾವ ರಾಜ್ಯದಲ್ಲೂ ಇಲ್ಲ. ಇದರಿಂದ ಒಂದು ವರ್ಷಕ್ಕೆ ಸರ್ಕಾರಕ್ಕೆ 34 ಕೋಟಿ ರೂಪಾಯಿಗಳಷ್ಟು ಖೋತ ಆಗುತ್ತಿದೆ. ಇದನ್ನು ಕೊಟ್ಟಿರುವ ಉದ್ದೇಶ ಏನೆಂದರೆ, ಒಂದು ಕಾಲದಲ್ಲಿ ಮದ್ರಾಸ್‌ನಲ್ಲಿ ಇರತಕ್ಕಂಥವರು ಕರ್ನಾಟಕ ರಾಜ್ಯಕ್ಕೆ ಬರಬೇಕು, ಕರ್ನಾಟಕದಲ್ಲೇ ಬೇರೂರಬೇಕು ಎಂಬ ಹಿನ್ನಲೆಯಲ್ಲಿ ಇದನ್ನು ಕೊಡಲಾಯಿತು. ಹಿಂದೆಯೂ ಸಬ್ಸಿಡಿ ಎನ್ನುವುದು ಇತ್ತು. ಸರ್ಕಾರ ಸಬ್ಸಿಡಿ ಕೊಡಬೇಕಾದರೆ, 1996-97ನೇ ಸಾಲಿನಿಂದ ಗುಣಮಟ್ಟವನ್ನು ಮತ್ತು ಕಲಾತ್ಮಕವನ್ನು ನೋಡಿ ಕ್ರೌರ್ಯ, ಹಿಂಸೆ, ಲೈಂಗಿಕತೆ ಇದ್ದಲ್ಲಿ ಪ್ರಚೋದನೆ ಕೊಡತಕ್ಕಂಥದ್ದಕ್ಕೆ ನಾವು ಸಬ್ಸಿಡಿಯನ್ನು ಕೊಡಬಾರದು ಎಂದು ಇದೇ ಸದನದಲ್ಲಿ ಚರ್ಚೆ ಮಾಡಿ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕೆಂದು ನೀವೇ ಹೇಳಿರುತ್ತೀರಿ. 1996-97ನೇ ಸಾಲಿನಿಂದ ಸಬ್ಸಿಡಿಯನ್ನು ಯಾವ ಚಿತ್ರಕ್ಕೆ ಅರ್ಹತೆ ಇದೆ, ಅದು, ಕಲಾತ್ಮಕ, ಗುಣಾತ್ಮಕ ಚಿತ್ರಗಳಿಗೆ ಮಾತ್ರವೇ ಹೊರತು ಬಾಕಿ ಇರತಕ್ಕಂಥ ಚಿತ್ರಗಳಿಗೆ ಅಲ್ಲ ಎಂಬುದು ಸರ್ಕಾರದ ಸ್ಪಷ್ಟ ನೀತಿ.

ಶ್ರೀ ವಾಟಾಳ್ ನಾಗರಾಜ್ : ಗುಣಾತ್ಮಕವನ್ನು ನಿರ್ಧಾರ ಮಾಡತಕ್ಕಂಥವರು ಯಾರು? ಇದಕ್ಕೆ ಸೆನ್ಸಾರ್ ಮಂಡಳಿ ಇದೆ. ಸೆನ್ಸಾರ್ ಮಂಡಳಿ ಮಾಡಿರುವ ಉದ್ದೇಶ ಏನು? ಕೆಟ್ಟ ಚಿತ್ರಗಳನ್ನು

ತಡೆಹಿಡಿಯುವುದಕ್ಕೆ ಸೆನ್ಸಾರ್ ಮಂಡಳಿ ಇರತಕ್ಕಂಥದು. ಸೆನ್ಸಾರ್ ಮಂಡಳಿ ಇದ್ದರು ನೀವು ಇನ್ನೊಂದು ಸೆನ್ಸಾರ್ ಮಂಡಳಿಯನ್ನು ಮಾಡುತ್ತಿದ್ದೀರಾ? ಈ ಸರ್ಕಾರದ ನೀತಿ ಒಳ್ಳೆಯದಲ್ಲ.

ಅಧ್ಯಕ್ಷರು : ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ನೀವು ಇತ್ತೀಚೆಗೆ ಬಂದಿರತಕ್ಕಂಥ ಕನ್ನಡ ಸಿನಿಮಾಗಳನ್ನು ನೋಡುತ್ತಿದ್ದೀರಾ? ಈ ಸಿನಿಮಾಗಳಿಗೆ ಕೊಡತಕ್ಕಂಥ ಟೈಟಲ್‌ಗಳನ್ನು ಓದಿದ್ದೀರಾ? ಇಂಥ ಚಿತ್ರಗಳಿಗೆ ಸಬ್ಸಿಡಿ ಕೊಡಬೇಕಾ? ನಿಮ್ಮ ಆತ್ಮಮುಟ್ಟಿ ಹೇಳಬೇಕು. ಕೊಡಬೇಕೆಂದರೆ, ನಾನು ಅವರಿಗೆ ಒಪ್ಪಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನೋಡಿದ್ದೇವೆ. ನಾನು ತಮಗೆ ಒಂದು ಮನವಿ ಸಲ್ಲಿಸುತ್ತೇನೆ. ತಮ್ಮ ಜೊತೆಯಲ್ಲಿ ನಾನು ಸಹಮತದಿಂದ ಇದ್ದೇನೆ.

ಅಧ್ಯಕ್ಷರು : ಬಹಿರಂಗ ಸಭೆಯಲ್ಲಿ ಈ ವಿಚಾರವಾಗಿ ಮಾತನಾಡಬೇಕೆಂದು ನೀವೇ ನನಗೆ ಹೇಳುತ್ತೀರಿ. ಈಗ ನೀವೇ ಈ ರೀತಿ ಹೇಳಿದರೆ ನನ್ನ ಗತಿ ಏನು? ನಾಗೇಗೌಡರೆ ನೀವಾದರೂ ನಮ್ಮ ರಕ್ಷಣೆಗೆ ಬನ್ನಿ.

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ, ಕೆಲವೊಂದು ಸಾರಿ ಒಳ್ಳೆಯ ಚಿತ್ರಗಳು ಬರುತ್ತವೆ ಮತ್ತು ಕೆಟ್ಟ ಚಿತ್ರಗಳು ಬರುತ್ತವೆ. ಕೆಟ್ಟ ಚಿತ್ರಗಳಿಗೆ ಬೇರೆ ರೀತಿಯಲ್ಲಿ ಕಡಿವಾಣ ಹಾಕೋಣ, ಆದರೆ ಚಲನಚಿತ್ರಗಳಿಗೆ ಸಹಾಯಧನವನ್ನು ನಿಲ್ಲಿಸಬೇಕೆಂಬ ಉದ್ದೇಶ ಏನು ಇದೆ, ಆ ಉದ್ದೇಶಕ್ಕೆ ಭಂಗ ಬರುತ್ತದೆ. ಕೆಟ್ಟ ಚಿತ್ರಗಳನ್ನು ತಡೆಯುವುದಕ್ಕೆ ಬೇರೆ ವಿಚಾರ ಮಾಡೋಣ. ಆದ್ದರಿಂದ ಇದರ ಬಗ್ಗೆ ದಯಮಾಡಿ ಮತ್ತೊಮ್ಮೆ ಪರಿಶೀಲನೆ ಮಾಡುತ್ತೀರಾ?

ಅಧ್ಯಕ್ಷರು : ನಾನು ಸದನದ ಸದಸ್ಯನಾಗಿ ಇಷ್ಟು ಮಾತ್ರ ಹೇಳುತ್ತೇನೆ. ಸರ್ಕಾರದ ನಿಲುವು ಏನಿದೆ ಗೊತ್ತಿಲ್ಲ. ನಾವು ಕೊಡತಕ್ಕಂಥ ಪ್ರತಿ ಹಣ ಅದು ಎಲ್ಲಾ ಸಾಮಾನ್ಯ ಮನುಷ್ಯನಿಂದ ವಸೂಲಾದಂತಹ ತೆರಿಗೆಯ ಹಣ, ಇದನ್ನು ಸರ್ಕಾರದ ಖಜಾನೆಯಿಂದಲೇ ಕೊಡಬೇಕು. ಸೆನ್ಸಾರ್ ಬೋರ್ಡ್‌ನವರು ಯಾವುದಕ್ಕೆ ಬೇಕಾದರೂ ಕ್ಲಿಯರೆನ್ಸ್ ಕೊಡಲಿ, ಆದರೆ ಯಾವುದನ್ನು ಪ್ರೋತ್ಸಾಹಿಸಬೇಕು, ಯಾವುದನ್ನೂ ಪ್ರೋತ್ಸಾಹಿಸಬಾರದು ಎಂಬುದನ್ನು ವಿವೇಚನೆಯಲ್ಲಿ ಇಟ್ಟುಕೊಳ್ಳೋಣವೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಅಭಿಪ್ರಾಯಕ್ಕೆ ನನ್ನ ಸಹ ಮತ ಇದೆ. ಕಲಾತ್ಮಕ ಚಿತ್ರಗಳೆಂದು ಅವರು ಹೇಳುತ್ತಾರೆ. ಕಲಾತ್ಮಕ ಚಿತ್ರ ಯಾವುದು ? ಮತ್ತು ಗುಣಮಟ್ಟವನ್ನು ನಿರ್ಧಾರ ಮಾಡತಕ್ಕಂಥವರು ಯಾರು. 4 ಜನರ ಒಂದು ಸಮಿತಿ ಮಾಡಬಹುದು. ಆ ಸಮಿತಿಗೆ ಮತ್ತೆ ನಾವು ಅರ್ಜಿಯನ್ನು ಹಾಕಿಕೊಂಡು, ನನ್ನ ಚಿತ್ರಕ್ಕೆ ಅನುಮತಿ ಕೊಡಿ ಎಂದು ಕೇಳಬೇಕು. ನನಗೆ ಬೇಕಾದವರನ್ನು ಅಥವಾ ಅವರವರ ಸಹಕಾರದ ಮೇಲೆ ಆ ಚಿತ್ರಕ್ಕೂ ಕೊಡಬೇಕು. ಮತ್ತೆ ಇಲ್ಲಿಯೂ ರಾಜಕೀಯ ಪ್ರಾರಂಭವಾಗುತ್ತದೆ.

ಅಧ್ಯಕ್ಷರು : ಸರ್ಕಾರ ಏನು ಹೇಳುತ್ತದೆ ಕೇಳೋಣ.

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ನಾವು ಹಿಂದೆ ಶೇಕಡ 50 ರಷ್ಟು ಮನರಂಜನಾ ತೆರಿಗೆಯನ್ನು ಮಾತ್ರ ಕೊಡುತ್ತಿದ್ದೆವು. ಆದರೆ ಅವರು ಶೇಕಡ 100ರಷ್ಟು ಮನರಂಜನಾ ತೆರಿಗೆಯ ವಿನಾಯ್ತಿ ಕೊಡಿ ಎಂದು ಕೇಳಲಿಲ್ಲ. ರಾಜ್ಯಸರ್ಕಾರ ಈ ತೀರ್ಮಾನವನ್ನು ತೆಗೆದುಕೊಂಡಿದೆ. ಒಂದು ವರ್ಷದಲ್ಲಿ 80-85 ಕನ್ನಡ ಚಿತ್ರಗಳನ್ನು ತಯಾರು ಮಾಡುತ್ತಿದ್ದು, ಒಂದು ಚಿತ್ರಕ್ಕೆ 4 ಲಕ್ಷ ಅಂದುಕೊಂಡರೂ ಕೇವಲ 100 ಕೋಟಿ ಒಂದು ವರ್ಷಕ್ಕೆ ಆಗುತ್ತದೆ. ಆದರೆ ಮನರಂಜನಾ ತೆರಿಗೆಗೆ ಶೇಕಡ 100ರಷ್ಟು ವಿನಾಯ್ತಿ ಕೊಟ್ಟಿದ್ದರಿಂದ ಒಂದು ವರ್ಷದಲ್ಲಿ ಅಂದರೆ 1996-97ರಲ್ಲಿ 17 ಕೋಟಿ ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದೇವೆ. ಇದು ಅವರಿಗೆ ಕೊಟ್ಟಂತಹ ಪ್ರೋತ್ಸಾಹ. ಇದರ ಜೊತೆಗೆ ಎಲ್ಲಾ ಚಿತ್ರಗಳಿಗೆ ಸಬ್ಸಿಡಿ ಕೊಡಿ ಎಂದು ಕೇಳಿದರೆ ಕೊಡುವುದಕ್ಕೆ ಆಗುವುದಿಲ್ಲ. ಇದು ಸರ್ಕಾರದ ನೀತಿ ಅಲ್ಲ. ಆದುದರಿಂದ ಈ ಸಂದರ್ಭದಲ್ಲಿ ತಾವು ಕೇಳಿರುವ ಮಾನದಂಡ ಯಾವುದು, ಆ ಮಾನದಂಡವನ್ನು ಮಾಡುವುದಕ್ಕೆ ಒಂದು ಉನ್ನತ ಮಟ್ಟದ ಸಮಿತಿಯನ್ನು ಮಾಡಿ, ಯಾವುದಕ್ಕೆ ಕೊಡಬೇಕು ಅದಕ್ಕೆ ಮಾತ್ರ ಕೊಡುತ್ತಿದ್ದೇವೆ. ಶೇಕಡ 100ರಷ್ಟು ಮನರಂಜನೆ ವಿನಾಯ್ತಿ ಕೊಟ್ಟಮೇಲೆ ಮತ್ತೆ ಸಬ್ಸಿಡಿ ಕೊಡಬೇಕೆಂದು ಕೇಳಿದರೆ ಹೇಗೆ? ಈಗಾಗಲೇ ಹೆಚ್ಚುವರಿಯಾಗಿ 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಮಾನ್ಯ ವಾಟಾಳ್ ನಾಗರಾಜ್‌ರವರೆ, ಉತ್ತಮವಾದಂತಹ ಚಿತ್ರಗಳು ಬಂದಾಗ ಕೆಲವು ಸಂದರ್ಭದಲ್ಲಿ ಗಲ್ಲಾ ಪೆಟ್ಟಿಗೆಯಲ್ಲಿ 2 ನಿಮಿಷಗಳು ನಡೆಯುವುದಿಲ್ಲ. ಕೆಲವು ಉತ್ತಮ ಚಿತ್ರಗಳು ಒಂದು ವಾರ ಕೂಡ ನಡೆಯುವುದಿಲ್ಲ. ಅಂತಹ ಚಿತ್ರಗಳನ್ನು ನಾವು ಸ್ವಲ್ಪ ಮಟ್ಟಿಗೆ ಎತ್ತರಕ್ಕೆ ತರಬೇಕೆಂಬ ಹಿನ್ನೆಲೆಯಲ್ಲಿ ನಾವು ಇಂಥವರಿಗೆ ಕೊಡುತ್ತಿದ್ದು, ಬಾಕಿ ಚಿತ್ರಗಳಿಗೆ ಕೊಡುವುದಿಲ್ಲ. ಇದು ಸರ್ಕಾರದ ಸ್ಪಷ್ಟ ಚಿಂತನೆ.

ಶ್ರೀ ವಾಟಾಳ್ ನಾಗರಾಜ್ : ನಮ್ಮಮೂಲ ಉದ್ದೇಶಕ್ಕೆ ಭಂಗ ಬರುತ್ತಿದೆ. ಈ ಹಣದಿಂದ ಕನ್ನಡ ಚಿತ್ರರಂಗದ ಬೆಳವಣಿಗೆಗೆ ನಾವು ಏನು ಮಾಡಿದ್ದೇವೆ, ಆ ಬೆಳವಣಿಗೆಗಾಗಿ, ಸರ್ಕಾರ ಯಾವ ಉದ್ದೇಶಕ್ಕೋಸ್ಕರ ಮಾಡಿತ್ತು, ಆ ಮೂಲ ಉದ್ದೇಶಕ್ಕೆ ಕೊಡಲಿ ಪೆಟ್ಟು ಬೀಳುತ್ತದೆಂದು ನಾನು ಹೇಳುತ್ತೇನೆ.

ಶ್ರೀ ಎಂ. ಸಿ. ನಾಣಯ್ಯ : ಮೂಲ ಉದ್ದೇಶಕ್ಕೆ ಯಾವುದೇ ಕೊಡಲಿ ಪೆಟ್ಟು ಕೊಟ್ಟಿಲ್ಲ. 1967-68ನೇ ಸಾಲಿನಿಂದ ಇವತ್ತಿನವರೆಗೆ 21 ಕೋಟಿ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಟ್ಟಿದ್ದೇವೆ. ಈಗ ಶೇಕಡ 100ರಷ್ಟು ಮನರಂಜನಾ ತೆರಿಗೆ ಕೊಡುತ್ತಿರುವುದು 1997-98ನೇ ಸಾಲಿನಿಂದ ಎಂದು ಈಗಾಗಲೇ ಹೇಳಿದ್ದೇವೆ. ಆದರೆ ಉತ್ತಮವಾದಂತಹ ಚಿತ್ರಗಳನ್ನು ತಂದು ಕರ್ನಾಟಕ ರಾಜ್ಯದಲ್ಲಿ ಪರ ಭಾಷೆ ಚಿತ್ರಗಳ ಜೊತೆ ಪೈಪೋಟಿ ನಡೆಯಲಿಕ್ಕೆ ಪ್ರೋತ್ಸಾಹವನ್ನು ಕೊಟ್ಟಿದ್ದೇವೆ. ಇದಕ್ಕಿಂತ ಹೆಚ್ಚು ರಾಜ್ಯ ಸರ್ಕಾರ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪರ ಭಾಷೆ ಚಿತ್ರಗಳ ಬಗ್ಗೆ ತಾವು ಮಾತನಾಡುತ್ತಿದ್ದೀರಿ. ಕೇರಳ ಮತ್ತು ಆಂಧ್ರಪ್ರದೇಶ, ತಮಿಳುನಾಡಿನಲ್ಲಿ ಕನ್ನಡ ಚಿತ್ರಗಳನ್ನು ಅವರು ಅಲ್ಲಿ ಪ್ರದರ್ಶನ ಮಾಡುವುದಿಲ್ಲ. ಆದರೆ ಕರ್ನಾಟಕದಲ್ಲಿ ಎಲ್ಲಾ ಚಿತ್ರಗಳು ಬರುತ್ತವೆ. ತಾವು ಆ ಸರ್ಕಾರಕ್ಕೆ ಪತ್ರ ಬರೆದು ಕೇಳಿ,

ಕೊನೆಯಪಕ್ಷ 3 ತಿಂಗಳಾದರೂ ಕನ್ನಡ ಚಿತ್ರಗಳನ್ನು ಕಡ್ಡಾಯವಾಗಿ ಪ್ರದರ್ಶನ ಮಾಡುತ್ತೀರಾ ಎಂದು ಕೇಳತಕ್ಕಂಥದ್ದನ್ನು ತಾವೇನಾದರೂ ತಮ್ಮ ಸರ್ಕಾರದಲ್ಲಿ ಇಟ್ಟುಕೊಂಡಿದ್ದೀರೋ?

ಶ್ರೀ ಎಂ. ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ, ಚಿತ್ರದ ನೀತಿ, ಸಂದೇಶ ಮತ್ತು ರೂಪುರೇಷೆಗಳು ಹಾಗೂ ನೋಡುವವರ ಮೇಲೆ ಅದು ಅವಲಂಭಿತವಾಗಿದೆ. ಕರ್ನಾಟಕದಲ್ಲಿ ಕನ್ನಡ ಚಲನಚಿತ್ರಗಳಿಗೆ ಆದ್ಯತೆ ಕೊಡಬೇಕೆಂದೇ ಶೇಕಡ ನೂರರಷ್ಟು ಮನರಂಜನಾ ತೆರಿಗೆಯನ್ನು ಕೊಡಲಾಗಿದೆ. ಬಾಕಿ ಯಾವ ಚಿತ್ರಗಳಿಗೂ ನಾವು ಕೊಡುತ್ತಿಲ್ಲ. ಮಾನ್ಯ ಸಭಾಧ್ಯಕ್ಷರು ಹೇಳಿದ ಹಾಗೆ ಈಗಿನ ಸಂದರ್ಭದಲ್ಲಿ ತಯಾರಾಗುತ್ತಿರುವ ಚಿತ್ರಗಳಿಗೆ ಕೊಡುತ್ತಿರುವ ಹೆಸರುಗಳನ್ನು ನೋಡಿದರೆ ಏತಕ್ಕಾಗಿ ಸಹಾಯ ಧನ ಕೊಡಬೇಕೆನ್ನುವ ಪ್ರಶ್ನೆ ಉದ್ಭವಿಸುತ್ತದೆ.

ದ. ಕನ್ನಡ ಜಿಲ್ಲೆಯ ಮೀನುಗಾರರಿಗೆ ಸಂದಾಯ ಮಾಡಿದ ಪರಿಹಾರ.

314 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಅತಿಯಾದ ಮಳೆಯಿಂದ ಮೀನುಗಾರರು ವಾಸವಾಗಿರುವ ಮನೆಗಳು ಬಿದ್ದುಹೋಗಿರುವ ಪ್ರಕರಣಗಳೆಷ್ಟು? (ತಾಲ್ಲೂಕುವಾರು ವಿವರವನ್ನು ಒದಗಿಸುವುದು)*

ಆ) *ಮೀನುಗಾರಿಕಾ ಇಲಾಖೆಯಿಂದ ಆಂಶಿಕ ಹಾಗೂ ಪೂರ್ಣ ಹಾನಿಯಾದ ಮನೆಗಳಿಗೆ ಕೊಟ್ಟ ಪರಿಹಾರ ಎಷ್ಟು? (ತಾಲ್ಲೂಕುವಾರು ಫಲಾನುಭವಿಗಳ ಹೆಸರು, ವಿಳಾಸ ತಿಳಿಸುವುದು)*

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಒಟ್ಟು 32 ಮನೆಗಳು (ಆಂಶಿಕವಾಗಿ)

1) ಉಡುಪಿ ತಾಲ್ಲೂಕು - 8 ಮನೆಗಳು

2) ಕುಂದಾಪುರ ತಾಲ್ಲೂಕು - 24 ಮನೆಗಳು

ಆ) ಮೀನುಗಾರಿಕೆ ಇಲಾಖೆಯಿಂದ ಪರಿಹಾರ ನೀಡಿರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಉತ್ತರ ಪರಿಪೂರ್ಣವಾಗಿಲ್ಲವೆಂದು ನನ್ನ ಅನಿಸಿಕೆ. ಏಕೆಂದರೆ, ಉಡುಪಿ ತಾಲ್ಲೂಕಿನಲ್ಲಿ 8 ಮನೆಗಳು ಮತ್ತು ಕುಂದಾಪುರದಲ್ಲಿ 26 ಮನೆಗಳು ಹೋಗಿವೆ ಎನ್ನತಕ್ಕಂಥ ವರದಿಯನ್ನು ಕೊಟ್ಟಿದ್ದಾರೆ. ಮೀನುಗಾರಿಕೆ ಇಲಾಖೆಯವರು ಪರಿಹಾರ ಕೊಡದೇ ಇರುವುದರಿಂದ ಮನೆಗಳು ನಾಶವಾಗಿರುವ ಬಗ್ಗೆ ಸರಿಯಾದ ಅಂಕಿ ಸಂಖ್ಯೆಗಳು ಸಿಗುವುದಿಲ್ಲ. ಕರಾವಳಿ ಪ್ರದೇಶದಲ್ಲಿ ಒಟ್ಟು 9 ವಿಧಾನ ಸಭಾ